www.ecourtsindia.com

# ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
## ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಳ್ತಂಗಡಿ.

## ಸಿಸಿ ಸಂಖ್ಯೆ **785/2017**

**ಚಾಸಾಃ 2 ಪ್ರಾಸಾಃ 2**

| | |
|---|---|
| ಹೆಸರು | : ಜಸಿಂತಾ ಪಿಂಟೋ |
| ಗಂಡನ ಹೆಸರು | : ಬೊನಿಫಾಸ್ ಪಿಂಟೋ |
| ಪ್ರಾಯ | : 54 ವರ್ಷ |
| ಉದ್ಯೋಗ | : ಅಟೆಂಡರ್ |
| ವಾಸ | : ಬಡಗರಂದೂರು ಗ್ರಾಮ, ಬೆಳ್ತಂಗಡಿ ತಾಲೂಕು |

ದಿನಾಂಕ 1-4-2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ. ರವರಿಂದಃ

2007 ರಿಂದ ಇಲ್ಲಿಯವರೆಗೆ ನಾನು ಅಳದಂಗಡಿಯ ಸೈಂಟ್ ಪೀಟರ್ ಕ್ಲೇವರ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಅಟೆಂಡರ್ ಆಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ. ದಿನಾಂಕ 24-5-2017 ರಂದು ಬೆಳಗ್ಗೆ 8-10 ಗಂಟೆ ಸಮಯಕ್ಕೆ ನಾನು ನೋಡಿದಾಗ ಶಾಲೆಯ ಗೇಟ್ ತೆರೆದಿತ್ತು, ಆಗ ನಾನು ಒಳಗೆ ಹೋಗದೆ ಚಾಸಾ-1 ಮತ್ತು 3 ರವರಿಗೆ ಈ ಬಗ್ಗೆ ಮಾಹಿತಿ ನೀಡಿರುತ್ತೇನೆ. ಹೊರಗಿನಿಂದ ಶಾಲೆಯ ಒಳಗೆ ಕಪಾಟುಗಳನ್ನು ತೆರೆದು ರೂ. 45,000 ಹಣ ಕಳುವಾಗಿರುತ್ತದೆ, ಆದರೆ ಯಾರು ಕಳುವು ಮಾಡಿರುತ್ತಾರೆಂದು ಗೊತ್ತಿರುವುದಿಲ್ಲ. ನಾನು ಆರೋಪಿಗಳನ್ನು ನೋಡಿರುವುದಿಲ್ಲ. ಉಳಿದ ವಿಚಾರಗಳನ್ನು ಅವರು ನೋಡಿಕೊಂಡಿದ್ದು ನನಗೆ ಈ ಬಗ್ಗೆ ಗೊತ್ತಿರುವುದಿಲ್ಲ. ಕಳುವಾದ ಹಣದಲ್ಲಿ ರೂ. 5,000 ಹಣ ವಾಪಸ್ಸು ಸಿಕ್ಕಿರುತ್ತದೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿದ ಅದರಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಲು ನಿರಾಕರಿಸಿದ್ದು ಅದು ನನ್ನ ಸಹಿಯಲ್ಲ ಎಂದು ನುಡಿಯುತ್ತಾರೆ. ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿರುವುದಿಲ್ಲ ಹಾಗೂ ಏನನ್ನೂ ಅಮಾನತುಪಡಿಸಿಕೊಂಡಿರುವುದಿಲ್ಲ. ಪೊಲೀಸರಿಗೆ ಹೇಳಿಕೆ ಮತ್ತು ಮರು ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವರ ಹಣವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಎಂಒ-2 ಎಂದು ಗುರುತಿಸಲಾಗಿರುತ್ತದೆ.

This is a True Copy of the Court Records Online. Authenticated @ districts.ecourtsindia.com/cnr/KADK510014832017/truecopy/order-1.pdf

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮಾನ್ಯ ಸ.ಸ.ಅ ಕೋರಲಾಗಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಮಾನ್ಯ ಸ. ಸ. ಅ. ರವರಿಂದಃ

ಚಾಸಾ-1 ಮತ್ತು 3 ರವರ ಜೊತೆ ಶಾಲೆಯ ಒಳಗೆ ಹೋದಾಗ ಯಾರೋ ಕಳ್ಳರು ಶಾಲೆಯ ಬಾಗಿಲಿಗೆ ಅಳವಡಿಸಿದ ಕಬ್ಬಿಣದ ಬೀಗವನ್ನು ಹೊಡೆದು ಹಾಕಿ ಕಛೇರಿಯ ಬಾಗಿಲನ್ನು ಹೊಡೆದು ಬೀಗ ಮುರಿದು ಒಳ ಪ್ರವೇಶಿಸಿ ಕಛೇರಿಯ ಒಳಗಿದ್ದ ಕಬ್ಬಿಣದ ಕಪಾಟುಗಳ ಬೀಗವನ್ನು ಬಲತ್ಕಾರವಾಗಿ ಹೊಡೆದು ಕಪಾಟಿನಲ್ಲಿ ಇಟ್ಟಿದ್ದ ಪುಸ್ತಕಗಳನ್ನು ಚೆಲ್ಲಾಪಿಲ್ಲಿಯಾಗಿ ಮಾಡಿರುತ್ತಾರೆ ಎಂದರೆ ಸರಿ. ಮುಖ್ಯ ಶಿಕ್ಷಕಿಯ ಕಛೇರಿಯಲ್ಲಿಟ್ಟಿದ್ದ ಕಬ್ಬಿಣದ ಕಪಾಟುಗಳನ್ನು ಹೊಡೆದು ಜಖಂಗೊಳಿಸಿರುವ ವಿಚಾರ ತಿಳಿದು ಬಂದಿರುತ್ತದೆ ಎಂದರೆ ಸರಿ. ಒಟ್ಟು 7 ಕಪಾಟುಗಳನ್ನು ಜಖಂಗೊಳಿಸಿರುತ್ತಾರೆ ಎಂದು ತಿಳಿದು ಬಂದಿರುತ್ತದೆ ಎಂದರೆ ಸರಿ.

ದಿನಾಂಕ 29-7-2017 ರಂದು ನಾನು ಕಛೇರಿಯಲ್ಲಿದ್ದ ಸಮಯ 1 ನೇ ಆರೋಪಿಯನ್ನು ಪೊಲೀಸರು ಶಾಲೆಗೆ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿ. 1 ನೇ ಆರೋಪಿ 2 ನೇ ಆರೋಪಿಯ ಜೊತೆ ಸೇರಿ ಶಾಲೆಯಲ್ಲಿ ಕಳ್ಳತನಮಾಡಿರುವುದಾಗಿ ಒಪ್ಪಿಕೊಂಡಿರುತ್ತಾನೆ ಎಂದರೆ ಸರಿ. ದಿನಾಂಕ 24-5-2017 ರಂದು ವೇಣೂರು ಪೊಲೀಸರು ತಕ್ಷೀರು ಸ್ಥಳಕ್ಕೆ ಬಂದು ಮಹಜರ್ ಕ್ರಮ ಜರುಗಿಸಿರುತ್ತಾರೆ ಎಂದರೆ ಸರಿ. ಸದರಿ ಮಹಜರ್ ಗೆ ನಾನು, ಚಾಸಾ-1 ಮತ್ತು 3 ರವರು ಸಹಿ ಮಾಡಿದ್ದು ಮಹಜರ್ ಮುಖೇನ ಪೊಲೀಸರು ಒಂದು ಬೀಗವನ್ನು ಅಮಾನತುಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಬೀಗವನ್ನು ಸಾಕ್ಷಿಯು ನ್ಯಾಯಾಲಯದ ಮುಂದೆ ನೋಡಿ ಗುರುತಿದಸಿದ್ದು ಅದನ್ನು ಈಗಾಗಲೇ ಎಂಒ-1 ಎಂದು ಗುರುತಿಸಲಾಗಿರುತ್ತದೆ. ನಿಪಿ-2 ರಲ್ಲಿರುವ ಸಹಿ ನನ್ನದೆ ಆದಗಿದ್ದರೂ ಸದರಿ ಸಹಿ ನನ್ನದಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-6 ರಲ್ಲಿ ಕಾಣುವ ಕೆಂಪು ಟೀ ಶರ್ಟ್ ಹಾಕಿರುವ ವ್ಯಕ್ತಿಯನ್ನು ನೋಡಿ ಗುರುತಿಸಿದ್ದು ಈ ವ್ಯಕ್ತಿಯೇ ನಮ್ಮ ಶಾಲೆಗೆ ಪೊಲೀಸರು ಕರೆದುಕೊಂಡು ಬಂದ ವ್ಯಕ್ತಿಯಾಗಿರುತ್ತಾರೆ ಎಂದರೆ ಸರಿ.

This is a True Copy of the Court Records Online. Authenticated @ districts.ecourtsindia.com/cnr/KADK510014832017/truecopy/order-1.pdf
www.ecourtsindia.com

<u>ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಪಿ ಎಂ ವಕೀಲರಿಂದಃ</u>

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ನನ್ನ ವಿಚಾರಣೆ ಮಾಡಿರುವುದಿಲ್ಲ. ಕಳ್ಳತನವಾಗಿದೆ ಎಂದು ಹೇಳಿದ ದಿನ ಚಾಸಾ-1 ಮತ್ತು 3 ರವರಿಗೆ ಮಾಹಿತಿ ನೀಡಿದ್ದನ್ನು ಬಿಟ್ಟು ಬೇರೆ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಪೊಲೀಸರು ನನ್ನ ಹೇಳಿಕೆ ಮತ್ತು ಮರು ಹೇಳಿಕೆ ಪಡೆದಿರುವುದಿಲ್ಲ ಎಂದರೆ ಸರಿ. ಪೊಲೀಸರು ಸ್ಥಳಕ್ಕೆ ಯಾಕೆ ಬಂದಿದ್ದರುವ ಮತ್ತು ಏನು ಮಾಡಿರುತ್ತಾರೆಂದು ಗೊತ್ತಿರವುದಿಲ್ಲ ಎಂದರೆ ಸರಿಯಲ್ಲ. ಮಹಜರ್ ಎಂದರೆ ಒಳಗಡೆ ಹೋಗಿ ತಪಾಸಣೆ ಮಾಡುವುದಾಗಿರುತ್ತದೆ. ಪೊಲೀಸರು ಬಂದು ನೋಡಿಕೊಂಡು ಹೋಗಿದ್ದನ್ನು ಬಿಟ್ಟರೆ ಬೇರೆ ಏನನ್ನೂ ಮಾಡಿರುವುದಿಲ್ಲ ಎಂದರೆ ಸರಿ. ಪೊಲೀಸರು ತಕ್ಷೀರು ಸ್ಥಳದಿಂದ ಏನನ್ನೂ ತೆಗೆದುಕೊಂಡು ಹೋಗಿರುವುದಿಲ್ಲ ಎಂದರೆ ಸರಿ. ಪೊಲೀಸರು ಒಬ್ಬ ವ್ಯಕ್ತಿಯನ್ನು ಏಕೆ ಕರೆದುಕೊಂಡು ಬಂದಿದ್ದರು ಎಂದು ಗೊತ್ತಿರುವುದಿಲ್ಲ. ನಾನು ಕೆಲಸ ಮಾಡುವ ಸಂಸ್ಥೆಗೆ ಸಹಾಯವಾಗಲಿ ಎಂದು ನನಗೇನೂ ಗೊತ್ತಿಲ್ಲದಿದ್ದರೂ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇರುವುದಿಲ್ಲ.</u>

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆಳರಚ್ಚು ಮಾಡಲಾಯಿತು.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ ದಂ.ಗಳು ಬೆಳ್ತಂಗಡಿ.

**(ಸಾ. ಓ. ಹೇ. ಕೇ. ಸ. ಇ. ಎ. ಒ.)**

This is a True Copy of the Court Records Online. Authenticated @ districts.ecourtsindia.com/cnr/KADK510014832017/truecopy/order-1.pdf